330 ಶ್ರೀ ಖಾದರ್ ಯು.ಟಿ (ಮಂಗಳೂರು)
ಜೆ. ಕೃಷ್ಣ ಪಾಲೇಮಾರ್(ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಮಂಗಳೂರು (ದಕ್ಷಿಣ ಕನ್ನಡ) ಬಂದರಿನಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಹೌದು

ಆ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ? ಇದಕ್ಕಾಗಿ ಖರ್ಚು ಮಾಡಲಾದ ಹಣವೆಷ್ಟು?

ಮಂಗಳೂರು (ದಕ್ಷಿಣ ಕನ್ನಡ) ಮೀನುಗಾರಿಕಾ ಬಂದರಿನಲ್ಲಿ ಹೂಳೆತ್ತುವ ಬಗ್ಗೆ ರೂ. 185.00 ಲಕ್ಷಗಳ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಕಾಮಗಾರಿ ಪ್ರಾರಂಭಿಸಲಾಗಿದ್ದು ಪ್ರಸ್ತುತ ಮುಕ್ತಾಯದ ಹಂತದಲ್ಲಿದೆ. ಈವರೆಗೆ ರೂ. 108.80 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

166 ಶ್ರೀ ಕಿಮ್ಮನೆ ರತ್ನಾಕರ್
ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಪ್ರತಿಯೊಂದು ಹೋಬಳಿಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಹೋಬಳಿಯಲ್ಲಿರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ:-

ಹೋಬಳಿ ಹೆಸರು	ಕೇಂದ್ರಗಳ ಸಂಖ್ಯೆ
ಮಂಡಗದ್ದೆ	50
ಕೋಣಂದೂರು	54
ಆಗುಂಬೆ	40
ಕಸಬಾ ತೀರ್ಥಹಳ್ಳಿ	60
ಮತ್ತೂರು	42
ಕೆರೆಹಳ್ಳಿ	7
ಹೊಸನಗರ	53
ಉಂಚ	44
ನಿಧಿಗೆ	31
ಒಟ್ಟು	**381**